ಕೆ.ಜಿ.ಎಫ್.ನಲ್ಲಿ ಅನಿರ್ದಿಷ್ಟವಾಗಿ ವಿದ್ಯುತ್ ಕಡಿತ

೧೬೪೪. ಟಿ. ಎಸ್. ಮಣಿ.—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಜಿ.ಎಫ್.ನಲ್ಲಿ ಬೇರೆ ಬೇರೆ ಅವಧಿಗಳಲ್ಲಿ ಅನಿರ್ದಿಷ್ಟ ಕಾಲದವರೆಗೆ ವಿದ್ಯುತ್ತಿನ ನಿಲುಗಡೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇಂತಹ ಅಸಮರ್ಪಕ ವಿದ್ಯುತ್ ನಿಲುಗಡೆಯಿಂದ ಪರೀಕ್ಷೆಗಳಿಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ವಿದ್ಯುತ್ ಪೂರೈಕೆಯಾಗದ ನಿರ್ದಿಷ್ಟ ಅವಧಿಗಳ ಬಗ್ಗೆ ಪೂರ್ವಭಾವಿಯಾಗಿ ಪ್ರಕಟಣೆಗಳನ್ನು ಮಾಡುವ ವಿಷಯಗಳನ್ನು ಸರ್ಕಾರವು ಪರಿಶೀಲಿಸಿದೆಯೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ಬೆಳಿಗ್ಗೆ ಹೊತ್ತು ಒಂದೂವರೆ ಗಂಟೆ ಕಾಲ ಮತ್ತು ಸಂಜೆ ಹೊತ್ತು ಅರ್ಧ ಗಂಟೆ ಕಾಲ ಈ ರೀತಿ ೨ ಗಂಟೆಗಳ ಕಾಲದ ಲೋಡ್ ಶೆಡ್ಡಿಂಗ್ ಮಾಡುವ ಕ್ರಮ ಜಾರಿಯಲ್ಲಿದೆ. ಇದಲ್ಲದೆ ಅನಿವಾರ್ಯ ಕಾರಣಗಳಿಂದ ಕೆಲವುಸಲ ನಿಲುಗಡೆ ಮಾಡಬೇಕಾಗುತ್ತದೆ.

ಆ) ವಿದ್ಯುತ್ತಿನ ನಿಲುಗಡೆಯಿಂದ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಲೋಡ್‌ಶೆಡ್ಡಿಂಗ್ ಬಗ್ಗೆ ನಿಗದಿತ ವೇಳೆಯಲ್ಲಿ ಸಾರ್ವಜನಿಕರಿಗೆ ಪ್ರತಿಗಳ ಮೂಲಕ ಈಗಾಗಲೇ ಮಾಹಿತಿ ನೀಡಲಾಗಿದೆ.

ಕೇಂದ್ರೋದ್ಯಮಗಳ ಮಾದರಿಯಲ್ಲಿ ರಾಜ್ಯ ಸ್ವಾಮ್ಯದ ನಿಗಮಗಳು

೧೬೫೧. ಶ್ರೀ ಎ ಬಿ. ದೇಸಾಯಿ (ಧಾರವಾಡ ಗ್ರಾಮಾಂತರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರೋದ್ಯಮಗಳ ಮಾದರಿಯಲ್ಲಿ ಸಂಪನ್ಮೂಲ ರೂಢಿಸಿಕೊಳ್ಳಲು ರಾಜ್ಯ ಸ್ವಾಮ್ಯದ ನಿಗಮಗಳು ಪ್ರಯತ್ನಿಸಿವೆಯೆ.

ಆ) ಹಾಗಿದ್ದಲ್ಲಿ ಸಂಪನ್ಮೂಲ ರೂಢಿಸಿಕೊಳ್ಳಲು ಪ್ರಯತ್ನಿಸಿರುವ ಸಂಸ್ಥೆಗಳು ಯಾವುವು.

ಇ) ಕೇಂದ್ರ ಸರ್ಕಾರದ ಅನುಮತಿಗಾಗಿ ಕಾದಿರುವ ರಾಜ್ಯಸ್ವಾಮ್ಯದ ಸಂಸ್ಥೆಗಳು ಮತ್ತು ನಿಗಮಗಳು ಯಾವುವು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—

ಅ) ಪ್ರಯತ್ನಿಸಿವೆ.

ಆ) ರಾಜ್ಯದ ಮತ್ತು ಕೇಂದ್ರದ ಸಾರ್ವಜನಿಕ ಉದ್ದಿಮೆಗಳ ಸಂಪನ್ಮೂಲ ರೂಢಿಸಿಕೊಳ್ಳುವಲ್ಲಿ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ವಿಶೇಷವಾಗಿ, ಕರ್ನಾಟಕ ಪವರ್ ಕಾರ್ಪೊರೇಷನ್, ಎನ್.ಜಿ.ಇ.ಎಫ್ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಪ್ರಯತ್ನಿಸಿವೆ.

ಇ) ಯಾವುದೂ ಇಲ್ಲ.